# ಸಂಜೆಯ ನಗು

ಶಾಂತವಾದ ಸಂಜೆ
ಬಂದು ಕೂತಿದೆ
ಮಳೆಯ ಹೊಳವು ಮಾಡಿಕೊಂಡು

ದಿಕ್ಕು ದಿಕ್ಕಿಗೆ ಡಿಕ್ಕಿ
ಹೊಡೆಯುವ ದಾರಿಗಳು
ನಡೆವವರ ನೆನೆದು
ನಗುವಂತಿವೆ

ಬಿಳಿಯೂ ಅಲ್ಲದ ಕಪ್ಪೂ
ಅಲ್ಲದ ಬೆಳಕು
ಬೆರಳಾಡಿಸುತ್ತಿದೆ ಸಂಜೆಯಂತೆ

ಪೇಟೆಯಲ್ಲಿ
ಕಾಮನಬಿಲ್ಲು ಕಮಾನು ಕಟ್ಟಿದೆ

ಅಂಗಡಿ ಬಾಗಿಲಿಗೆ
ನಗುವ ಅಳು ಅವರ
ಬಗಲಿಗೆ

ಹಟಮಾಡಿ ಅಪ್ಪನ ಬೈಕ್ ಹತ್ತಿ
ಬಂದ ಮಗ
ನಡುಗುತ್ತಿದೆ ಪೇಟೆ
ಹುಡುಗನ ಅಬ್ಬರಕೆ...

ನಗುತ್ತಿದೆ ಸಂಜೆ
ಅಳುವ ಹಾಗೆ ಕತ್ತಲ
ಹಿತ್ತಲಲ್ಲಿ.

**● ರಾಜು ಹೆಗಡೆ**
ಕಲೆ: ವಾಗೀಶ ಹೆಗಡೆ

